**ಸಾಕ್ಷಿಯನ್ನು ದಿನಾಂಕಃ05.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ M N R ವಕೀಲರಿಂದಃ**

1. ನಾನು ಬಿ ಎ ಪದವೀಧರ. ಈ ಕೇಸನ್ನು ನಮ್ಮ ಜಮೀನಿನ ಮೇಲೆ ವಿಭಾಗ ಬರಬೇಕೆಂದು ಚಿಕ್ಕಮರಿಗೌಡ ಸಲ್ಲಿಸಿದ್ದಾರೆ. ಅವರು ಒಟ್ಟು 26 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕೇಸ್ ಹಾಕಿದ್ದಾರೆ. ನನಗೆ ಸದರಿ ಒಟ್ಟು ಜಮೀನಿನ ಚಕ್ಕುಬಂದಿ ಗೊತ್ತು. ಸದರಿ ಜಮೀನಿನ ಮೂಲ ಮಾಲೀಕ ಪಿಡ್ಡೇಗೌಡ ಎಂಬ ಬಗ್ಗೆ ನನಗೆ ಮಾಹಿತಿ ಇದೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಇದುವರೆವಿಗೂ ಯಾವ ಯಾವ ನ್ಯಾಯಾಲಯಗಳನ್ನು ಏನೇನು ತೀರ್ಮಾನ ಆಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪಿಡ್ಡೇಗೌಡನಿಗೆ ದೊಡ್ಡನಂಜುಂಡ ಮತ್ತು ಚಿಕ್ಕನಂಜುಂಡ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ದೊಡ್ಡ ನಂಜುಂಡನ ಹೆಂಡತಿ ಮರಿಯಕ್ಕ ಎಂದರೆ ಸರಿ. ಅವರಿಗೆ ನಂಜಮ್ಮ, ನಿಂಗಮ್ಮ ಮತ್ತು ಸಣ್ಣಮ್ಮ ಎಂಬ ಮೂವರು ಹೆಣ್ಣು ಮಕ್ಕಳು ಎಂದರೆ ಸರಿ. ನಂಜಮ್ಮನಿಗೆ ತಮ್ಮೇಗೌಡ, ಬೋರೇಗೌಡ, ವಾದಿ ಮತ್ತು ಚಿಕ್ಕತಾಯಮ್ಮ ಎಂಬ 4 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ವಾದಿಯು ಯಾರ ಮಗ ಎಂದು ನನಗೆ ಗೊತ್ತಿಲ್ಲ. ಚಿಕ್ಕನಂಜುಂಡನ ವಾರಸುದಾರ ನಂಜ @ ಸುಬ್ಬಣ್ಣ. ಅವರಿಗೆ ರಮೇಶ, ಚೆನ್ನಕೇಶವ ಮತ್ತು ಸರೋಜಮ್ಮ ಎಂಬ ಮೂವರು ಮಕ್ಕಳು ಎಂದರೆ ಸರಿ. ಮರಿಯಕ್ಕನ 2 ನೇ ಮಗಳು ನಿಂಗಮ್ಮನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಮಾಹಿತಿ ಇಲ್ಲ. ಈ ಪ್ರಕರಣದಲ್ಲಿ ಎಷ್ಟು ಜನ ಪ್ರತಿವಾದಿಯರು ಇದ್ದಾರೆ ಮತ್ತು ಅವರು ಯಾರ

ಸಂಬಂಧಿಕರು ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ಈ ದಾವೆಯ 18 ನೇ ಪ್ರತಿವಾದಿ ಚೆನ್ನಮ್ಮ ಯಾರ ಮಗಳು ಎಂದು ನನಗೆ ಗೊತ್ತಿಲ್ಲ. ಮರಿಯಕ್ಕನ 3 ನೇ ಮಗಳು ಸಣ್ಣಮ್ಮನಿಗೆ ಎಷ್ಟು ಜನ ಮಕ್ಕಳು ಮತ್ತು ಅವರ ಗಂಡನ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ಈ ದಾವೆಯ 1 ನೇ ಪ್ರತಿವಾದಿ ಯಾರ ಮಗಳು ಎಂದು ನನಗೆ ಗೊತ್ತಿಲ್ಲ. ಈ ದಾವೆಯ 5 ರಿಂದ 10 ನೇ ಪ್ರತಿವಾದಿಯರು ಯಾರ ವಾರಸುದಾರರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವೆಯ 11 ರಿಂದ 19 ನೇ ಪ್ರತಿವಾದಿಯರು ಯಾರ ವಾರಸುದಾರರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

2. ನಾನು ಪ್ರತಿವಾದ ಪತ್ರ ಸಲ್ಲಿಸುವ ಸಂದರ್ಭದಲ್ಲಿ ಪ್ರತಿವಾದಿಯರು ಯಾರ ವಾರಸುದಾರರು ಎಂದು ಪರಿಶೀಲನೆ ಮಾಡಿದ್ದೇನಾ ಎಂದರೆ ನನಗೆ ಬರೆದುಕೊಟ್ಟಿರುವವರ ಬಗ್ಗೆ ನಾನು ಪರಿಶೀಲನೆ ಮಾಡಿದ್ದೇನೆ. ನನ್ನ ಪ್ರತಿವಾದ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿ ದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಲು ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ದೊಡ್ಡನಂಜುಂಡ ಮತ್ತು ಚಿಕ್ಕನಂಜುಂಡ ರವರ ಕುಟುಂಬದ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ಸಾಕ್ಷಿ ಮುಂದುವರಿದು ಅವರು ಮರಿಯಕ್ಕನ ವಾರಸುದಾರರು ಎಂಬುದು ಮಾತ್ರ ಗೊತ್ತು ಎಂದು ನುಡಿದಿರುತ್ತಾರೆ. ಪಿಡ್ಡೇಗೌಡರಿಗೆ ಯಾವ ಊರಿನಲ್ಲಿ ಜಮೀನು ಇತ್ತು ಎಂದು ನನಗೆ ಗೊತ್ತು. ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಪಿಡ್ಡೇಗೌಡ ರವರು ಬದುಕಿದ್ದಾಗ ತನ್ನ ಸ್ವತ್ತಿನ ಬಗ್ಗೆ ತನ್ನ ಮಕ್ಕಳ ನಡುವೆ

ಯಾವುದಾದರೂ ದಾಖಲೆ ಮಾಡಿದ್ದಾರಾ ಎಂದು ನನಗೆ ಮಾಹಿತಿ ಇಲ್ಲ. ನನ್ನ ಜನ್ಮ ದಿನಾಂಕಃ 22.07.1970. ಪಿಡ್ಡೇಗೌಡರವರು ಮೃತ ಹೊಂದಿದ ನಂತರ ದೊಡ್ಡ ನಂಜುಂಡ ಮತ್ತು ಚಿಕ್ಕ ನಂಜುಂಡ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವ ಬಗ್ಗೆ ನಾನು ದಾಖಲೆಯನ್ನು ನೋಡಿಲ್ಲ. ಅವರಿಬ್ಬರೂ ಯಾವಾಗ ಮೃತಪಟ್ಟರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

3. ನನ್ನ ತಂದೆಯು ನಂಜ @ ಸುಬ್ಬಣ್ಣನಿಂದ 2 ವರೆ ಎಕರೆ ಮತ್ತು ಬೋರಣ್ಣ ರವರಿಂದ 2 ಎಕರೆ 7 ಗುಂಟೆ ಜಮೀನನ್ನು ಖರೀದಿಸಿದ್ದರು ಎಂದು ನನಗೆ ಹೇಳಿದ್ದರು. ನನ್ನ ತಂದೆ ಒಟ್ಟು 2 ವರೆ ಎಕರೆ ಜಮೀನನ್ನು ನಂಜ @ ಸುಬ್ಬಣ್ಣ ರವರಿಂದ ಖರೀದಿಸಿದ್ದರು. ನಂಜ @ ಸುಬ್ಬಣ್ಣನಿಗೆ ಆ ಆಸ್ತಿ ಪಿತ್ರಾರ್ಜಿತವಾಗಿ ಬಂದಿತ್ತು. ಅವರ ಹೆಸರಿಗೆ ದಾಖಲೆ ಇತ್ತು. ಅವರ ಹೆಸರಿನಲ್ಲಿ ದಾವಾ ಸರ್ವೆ ನಂಬರ್ ನಲ್ಲಿ ಒಟ್ಟು ಎಷ್ಟು ವಿಸ್ತೀರ್ಣಕ್ಕೆ ಖಾತೆ ಇತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸರ್ವೆ ನಂಬರ್ ನಲ್ಲಿ 19 ಚಿಲ್ಲರೆ ಎಕರೆ ಜಾಗ ಪುಟ್ಟಸ್ವಾಮಿ ಹೆಸರಿನಲ್ಲಿ ಆರ್ ಟಿ ಸಿ ಬರುತ್ತಿದ್ದು, ಚಿಕ್ಕೋನು @ ಅಂಕೇಗೌಡ ರವರ ಹೆಸರಿನಲ್ಲಿ 2 ಎಕರೆ 7 ಗುಂಟೆ, ನನ್ನ ತಂದೆ ಹೆಸರಿನಲ್ಲಿ 2 ವರೆ ಎಕರೆ ಆರ್ ಟಿ ಸಿ ಬರುತ್ತಿದೆ. 19 ಚಿಲ್ಲರೆ ಎಕರೆ ಜಾಗ ನನ್ನ ಜಮೀನಿನ ಪಕ್ಕದಲ್ಲಿ ಇರುವುದರಿಂದ ಅವರ ಹೆಸರಿನಲ್ಲಿ ಆರ್ ಟಿ ಸಿ ಬರುತ್ತಿರುವುದು ನನಗೆ ಗೊತ್ತಿದೆ. ಅವರು ಆ ಜಮೀನನ್ನು ಮರಿಯಕ್ಕನ ಸಂಬಂಧಿಕರಾದ ಚೆನ್ನಕೇಶವ, ರಮೇಶ್, ಸರೋಜಮ್ಮ ಮತ್ತು ಶಿವರಾಜು ರವರಿಂದ

ಖರೀದಿಸಿದ್ದಾರೆ ಎಂದು ನನಗೆ ಮಾಹಿತಿ ಇದೆ. ನನ್ನ ತಂದೆ 2 ವರೆ ಎಕರೆ ಜಮೀನನ್ನು ಖರೀದಿ ಮಾಡಿದಾಗ ನನ್ನ ತಂದೆಗೆ ಮಾರಾಟ ಮಾಡಿದವರಿಗೆ ಆ ಜಮೀನಿನ ಮೇಲೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದೊಡ್ಡನಂಜುಂಡ ಮತ್ತು ಚಿಕ್ಕ ನಂಜುಂಡನ ನಡುವೆ ದಾವಾ ಸ್ವತ್ತು ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ವಿಭಾಗ ಆಗದೇ ಇದ್ದಿದ್ದರಿಂದ ನಂಜ @ ಸುಬ್ಬಣ್ಣನಿಗೆ ಇಂತದೇ ಜಾಗ ಎಂದು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ವಿಭಾಗದ ಬಗ್ಗೆ ಕಂದಾಯ ದಾಖಲಾತಿಗಳು ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ದೊಡ್ಡನಂಜುಂಡ ಮತ್ತು ಚಿಕ್ಕನಂಜುಂಡ, ಮರಿಯಕ್ಕ ಮತ್ತು ನಂಜಪ್ಪ @ ಸುಬ್ಬಣ್ಣ ರವರ ನಡುವೆ ವಿಭಾಗ ಆಗಿರುವ ಬಗ್ಗೆ ದಾಖಲೆಯನ್ನು ನಾನು ಲಿಖಿತ ಹೇಳಿಕೆ ಸಲ್ಲಿಸುವ ಕಾಲಕ್ಕೆ ಪರಿಶೀಲನೆ ಮಾಡಿಲ್ಲ. ಇದುವರೆವಿಗೂ ದಾವಾ ಸ್ವತ್ತು ಮರಿಯಕ್ಕನ ವಾರಸುದಾರರು ಅಥವಾ ಚಿಕ್ಕ ನಂಜುಂಡನ ವಾರಸುದಾರರ ನಡುವೆ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಸ್ವತ್ತು ವಾದಿ ಮತ್ತು ಚಿಕ್ಕ ನಂಜುಂಡನ ವಾರಸುದಾರರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿಗೆ ಕ್ರಯ ಪತ್ರವನ್ನು ಸೃಷ್ಠಿಸಿದ್ದು 2 ವರೆ ಎಕರೆ ಜಾಗದಲ್ಲಿ ನನ್ನ ತಂದೆಯಾಗಲೀ ನಾನಾಗಲೀ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಮರಿಯಕ್ಕನ ವಾರಸುದಾರರಿಗೆ ಮೋಸ ಮಾಡಬೇಕೆಂದು ನನ್ನ ತಂದೆ ಮತ್ತು ನಂಜ @ ಸುಬ್ಬ ಆ ಕ್ರಯ ಪತ್ರವನ್ನು ಸೃಷ್ಠಿಸಿದ್ದಾರೆ ಎಂದರೆ ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.